## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಕಚೇರಿ ಹಾಗೂ ರಾಜ್ಯ ಯೋಜನಾ ಮಂಡಳಿ ಕಚೇರಿಯ ಉಪಯೋಗಕ್ಕಾಗಿ ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸುವ ಬಗ್ಗೆ.

ಓದಲಾಗಿದೆ:

1) ಉಪಾಧ್ಯಕ್ಷರ ಟಿಪ್ಪಣಿ ಸಂಖ್ಯೆ:ರಾಯೋಮಂ:ಉಅ:07:2013 ದಿನಾಂಕ:4.2.2013.
2) ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 96 ಶಿವಾಪಿ 2012 ದಿನಾಂಕ:23.8.2012.
3) ಸರ್ಕಾರದ ಪತ್ರ ಸಂಖ್ಯೆ:ಪಿಡಿ 17 ಎಸ್‌ಪಿಇ 2013 ದಿನಾಂಕ:4.2.2013.

ಪ್ರಸ್ತಾವನೆ:

ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಕಚೇರಿಯ ಉಪಯೋಗಕ್ಕಾಗಿ ವಾಹನದ ಅವಶ್ಯಕತೆ ಇರುವ ಕಾರಣ ಒಂದು ಉತ್ತಮವಾದ ವಾಹನವನ್ನು ಹಂಚಿಕೆ ಮಾಡುವಂತೆ ಮಾನ್ಯ ಉಪಾಧ್ಯಕ್ಷರು ಮೇಲೆ ಓದಲಾದ (1) ಟಿಪ್ಪಣಿಯಲ್ಲಿ ಕೋರಿರುತ್ತಾರೆ.

ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಖಾಸಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಮೇಲೆ ಓದಲಾದ(2)ರ ಸರ್ಕಾರಿ ಆದೇಶದಲ್ಲಿ ಕೆಲವೊಂದು ಮಿತಿಗೊಳಪಟ್ಟು ಒದಗಿಸಲು ಅವಕಾಶವಿದೆ.

ಮೇಲೆ ಓದಲಾದ (3)ರ ಸರ್ಕಾರಿ ಪತ್ರದಲ್ಲಿ ವಿವಿಧ ಟ್ರಾವಲ್ಸ್ ಏಜೆನ್ಸಿಗಳಿಂದ ಎಸಿ ಕಾರಿಗೆ ದರಪಟ್ಟಿಯನ್ನು (quotations) ಪಡೆಯಲಾಗಿದೆ. ವಿವರಗಳು ಕೆಳಕಂಡಂತಿದೆ.

| ಟ್ರಾವಲ್ ಏಜೆನ್ಸಿಯ ಹೆಸರು | ಮಾಸಿಕ ಒಟ್ಟು 2500 ಕಿ.ಮೀ. ಅಥವಾ 300 ಗಂಟೆಗಳಿಗೆ | 2500 ಕಿ.ಮೀ. ನಂತರ ಪ್ರತಿ ಕಿ.ಮೀ. | 300 ಗಂಟೆಗಳ ನಂತರ ಪ್ರತಿ ಗಂಟೆಗೆ |
|---|---|---|---|
| ದೊಡ್ಡಮ್ಮದೇವಿ ಟೂರ್ಸ್ ಅಂಡ್ ಟ್ರಾವಲ್ಸ್ | ರೂ.30,000/- | ರೂ.7.50 | ರೂ.65.00 |
| ರಾಜಸಿಂಹ ಟ್ರಾವಲ್ಸ್ | ರೂ.29,975/- | ರೂ.7.00 | ರೂ.60-00 |
| ಸ್ಕಂದ ಟ್ರಾವಲ್ಸ್ | ರೂ.29,950/- | ರೂ.6.50 | ರೂ.55-00 |

ಸ್ವೀಕೃತವಾದ ಮೇಲ್ಕಂಡ ದರಪಟ್ಟಿಗಳನ್ನು ನಿಯಮಾನುಸಾರ ಪರಿಶೀಲಿಸಲಾಗಿದ್ದು ಅದರಲ್ಲಿ ಮೆ: ಸ್ಕಂದ ಟ್ರಾವಲ್ಸ್, 14ನೇ ಮೈನ್, 3ನೇ ಕ್ರಾಸ್, 4ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು-560 096 ಇವರು ಎಸಿ ಕಾರಿಗೆ ನಮೂದಿಸಿರುವ ರೂ.29,950/- ದರ ಪಟ್ಟಿಯು ಉಳಿದ ಟ್ರಾವಲ್ ಏಜೆನ್ಸಿಗಳ ದರಗಳಿಗಿಂತ ಅತ್ಯಂತ ಕಡಿಮೆ ಇರುತ್ತದೆ. ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ಎ.ಸಿ. ಕಾರಿಗೆ ನಿಗದಿ ಪಡಿಸಿರುವ ರೂ.30,000/- ದರದ ಮಿತಿಗಿಂತ ಕಡಿಮೆಯಿದ್ದ ಕಾರಣ ಮೆ: ಸ್ಕಂದ ಟ್ರಾವಲ್ಸ್ ಬೆಂಗಳೂರು-560 096 ಇವರನ್ನು ಆಯ್ಕೆ ಮಾಡಲಾಗಿರುತ್ತದೆ.

..2)

ಆದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ:ಪಿಡಿ 17 ಎಸ್‌ಪಿಐ 2013,</u>**
**<u>ಬೆಂಗಳೂರು, ದಿನಾಂಕ:8-2-2013</u>**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಹಿನ್ನಲೆಯಲ್ಲಿ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಹಾಗೂ ರಾಜ್ಯ ಯೋಜನಾ ಮಂಡಳಿ ಕಚೇರಿ ಉಪಯೋಗಕ್ಕಾಗಿ **ಒಂದು ಸ್ವಿಫ್ಟ್ ಡಿಸೈರ್ ಎಸಿ** ವಾಹನವನ್ನು ಈ ಕೆಳಕಂಡ ಬಾಡಿಗೆ ಆಧಾರದ ಮೇಲೆ ದಿನಾಂಕ:11ನೇ ಫೆಬ್ರವರಿ 2013ರಿಂದ ಜಾರಿಗೆ ಬರುವಂತೆ ಮುಂದಿನ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಹಾಗೂ ಅನುಬಂಧದಲ್ಲಿ ಸೂಚಿಸಲಾಗಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು **ಮೆಸರ್ಸ್ ಸ್ಕಂದ ಟ್ರಾವೆಲ್ಸ್,** 14ನೇ ಮೈನ್, 3ನೇ ಕ್ರಾಸ್, 4ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು-560 096 ಇವರಿಂದ ಪಡೆಯಲು ಮಂಜೂರಾತಿ ನೀಡಲಾಗಿದೆ.

ಮಾಸಿಕ ದರಗಳು

| ವಾಹನದ ಮಾದರಿ | ಮಾಸಿಕ ಒಟ್ಟು 2500 ಕಿ.ಮೀ. ಅಥವಾ 300 ಗಂಟೆಗಳಿಗೆ | 2500 ಕಿ.ಮೀ. ನಂತರ ಪ್ರತಿ ಕಿ.ಮೀ. | 300 ಗಂಟೆಗಳ ನಂತರ ಪ್ರತಿ ಗಂಟೆಗೆ |
|---|---|---|---|
| ಸ್ವಿಫ್ಟ್ ಡಿಸೈರ್ ಎಸಿ ಕಾರು | ರೂ.29,950/-<br><br>(ಇಪ್ಪತ್ತೊಂಭತ್ತು ಸಾವಿರ ಒಂಭೈನೂರ ಐವತ್ತು ರೂಪಾಯಿಗಳು ಮಾತ್ರ) | ರೂ.6.50<br><br>(ಆರು ರೂಪಾಯಿ ಐವತ್ತು ಪೈಸೆಗಳು) | ರೂ.55.00<br><br>(ಐವತ್ತೈದು ರೂಪಾಯಿಗಳು) |

2. ಈ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ " 3451-00-101-4-00-195 (ಯೋಜನೇತರ) " ವೆಚ್ಚದಡಿಯಲ್ಲಿ ಭರಿಸತಕ್ಕದ್ದು.

3. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 113 ಎಸ್‌ಪಿಎ 96, ದಿನಾಂಕ:17.5.1997 ರಲ್ಲಿ ರಾಜ್ಯ ಯೋಜನಾ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ನೀಡಲಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

RECEIVED ON ... CONTENTS NOT KNOWN
Tappal Section ... O/o. Accountant General (A & E) Karnataka, Bangalore-560 ...

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

( ಉಪಾಬಾಯಿ )
ಸರ್ಕಾರದ ಅಧೀನ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು. ..3)

೨) ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ ಇವರ ವಿಶೇಷ ಕರ್ತವ್ಯಾಧಿಕಾರಿಗಳಿಗೆ.

೩) ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ಸದಸ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ರಾಜ್ಯ ಯೋಜನಾ ಮಂಡಳಿ.

4) ಮೆಸರ್ಸ್ ಸ್ಪಂದ ಟ್ರಾವೆಲ್ಸ್, 14ನೇ ಮೈನ್, ೩ನೇ ಕ್ರಾಸ್, 4ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು-೫೬೦ ೦೯೬.

೫) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-೬).

೬) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

೭) ಸಹಾಯಕ ಖಜಾನಾಧಿಕಾರಿ, ರಾಜ್ಯ ಯೋಜನಾ ಮಂಡಳಿ.

೮) ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

<u>ಅನುಬಂಧ</u>

ಸರ್ಕಾರದ ಆದೇಶ ಸಂಖ್ಯೆ: ಪಿಡಿ 17 ಎಸ್‌ಪಿಜಿ 2013 ದಿನಾಂಕ:8.2.2013 ರ

<u>ಷರತ್ತು ಮತ್ತು ನಿಬಂಧನೆಗಳು</u>

1) ದಿನಾಂಕ:11.2.2013 ರಿಂದ ಜಾರಿಗೆ ಬರುವಂತೆ ಮುಂದಿನ ಒಂದು ವರ್ಷದ ಕಾಲಾವಧಿಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಈ ಬಾಡಿಗೆ ಆಧಾರಿತ ವಾಹನದ ಸೌಲಭ್ಯವು ಜಾರಿಯಲ್ಲಿರುತ್ತದೆ.

2) ವಾಹನ ಸರಬರಾಜುದಾರರಾದ ಮೆ: ಸ್ಕಂದ ಟ್ರಾವಲ್ಸ್‌ಗೆ ಯಾವುದೇ ಕಾರಣಗಳಿಂದಾಗಿ ಮುಂಗಡ ಹಣ ನೀಡಲಾಗುವುದಿಲ್ಲ.

3) ವಾಹನ ಚಾಲಕರು ತಪ್ಪದೇ ಸಮವಸ್ತ್ರವನ್ನು ಧರಿಸತಕ್ಕದ್ದು.

4) ವಾಹನ ಚಾಲಕರು ಕ್ರಮಬದ್ಧವಾಗಿ ಪರವಾನಗಿ ಹೊಂದಿರತಕ್ಕದ್ದು ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನಿಗಧಿಪಡಿಸಿದ ಎಲ್ಲಾ ದಾಖಲೆಗಳನ್ನು ಹೊಂದಿರತಕ್ಕದ್ದು.

5) ವಾಹನದ ದಾಖಲಾತಿ ಮತ್ತು ಪರವಾನಗಿಯನ್ನು ಕ್ರಮಬದ್ಧವಾಗಿ ಹೊಂದಿರತಕ್ಕದ್ದು.

6) ವಾಹನದ ಹೊಗೆ ನಿಯಂತ್ರಣದ ಬಗ್ಗೆ ಕ್ರಮಬದ್ಧ ಪ್ರಮಾಣ ಪತ್ರ ಹೊಂದಿರತಕ್ಕದ್ದು.

7) ಬೇಡಿಕೆಗೆ ಅನುಗುಣವಾಗಿ ವಾಹನಗಳನ್ನು ನಿಗಧಿಪಡಿಸಿದ ಅವಧಿಗೆ ತಪ್ಪದೇ ಒದಗಿಸತಕ್ಕದ್ದು.

8) ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸಲು ದರಪಟ್ಟಿಯಲ್ಲಿ ನಮೂದಿಸಿರುವ ದರಗಳನ್ನು ಯಾವುದೇ ಕಾರಣಕ್ಕೂ ಕರಾರಿನ ಅವಧಿಯಲ್ಲಿ ಮತ್ತೆ ಹೆಚ್ಚಿಸುವ ಅವಕಾಶಗಳಿರುವುದಿಲ್ಲ.

9) ಪ್ರತಿ ತಿಂಗಳು ಮುಕ್ತಾಯಗೊಂಡ ನಂತರ ಸಮರ್ಪಕವಾದ ಬಿಲ್ಲನ್ನು ಸಲ್ಲಿಸಿದ ನಂತರವೇ ಹಣಪಾವತಿ ಪ್ರಕಿಯೆ ಕೈಗೊಂಡು ಹಣವನ್ನು ಸಂಸ್ಥೆಗೆ ಚೆಕ್ ಮೂಲಕ ಸಂದಾಯ ಮಾಡಲಾಗುವುದು.

10) ಯಾವುದೇ ಕಾರಣ ನೀಡದೇ ಹಾಗೂ ಯಾವುದೇ ಮುನ್ಸೂಚನೆಯಿಲ್ಲದೇ ಈ ಒಪ್ಪಂದವನ್ನು ರದ್ದುಗೊಳಿಸುವ ಸಂಪೂರ್ಣ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

11) ಕಳಪೆ ಮಟ್ಟದ ವಾಹನಗಳನ್ನು ಒದಗಿಸಿದಲ್ಲಿ ಅಥವಾ ವಾಹನ ಒದಗಿಸುವಲ್ಲಿ ವಿಳಂಬ ನೀತಿ ಅನುಸರಿಸಿದ ಪಕ್ಷದಲ್ಲಿ ಈ ಕಾರ್ಯಾದೇಶವನ್ನು ರದ್ದುಪಡಿಸುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ ಹಾಗೂ ಇಂತಹ ಕ್ರಮಕ್ಕೆ ಸರಬರಾಜುದಾರ ಸಂಸ್ಥೆಯ ಹೆಸರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಿ ಮುಂದೆ ಯಾವುದೇ ಇಂತಹ ಕಾರ್ಯದಲ್ಲಿ ಭಾಗವಹಿಸದಂತೆ ನಿರ್ಬಂಧಿಸಲಾಗುವುದೆಂಬ ಷರತ್ತಿಗೆ ಒಳಪಟ್ಟಿರುತ್ತದೆ.

12) ವಾಹನವು ಕ್ರಮಿಸುವ ದೂರವನ್ನು ಕರ್ನಾಟಕ ಸರ್ಕಾರ ಸಚಿವಾಲಯದ ವಿಧಾನ ಸೌಧ, ವಿಕಾಸ ಸೌಧ ಹಾಗೂ ಬಹುಮಹಡಿ ಕಟ್ಟಡ, ಬೆಂಗಳೂರು ಇಲ್ಲಿಂದ ಮಾತ್ರ ಪರಿಗಣಿಸಲಾಗುವುದು.

13) ವಾಹನವನ್ನು ಕಚೇರಿಯ ಉಪಯೋಗಕ್ಕೆ ಒದಗಿಸಿದ ದಿನಾಂಕ ಮತ್ತು ವೇಳೆಯಿಂದ ಮಾತ್ರ ಪರಿಗಣಿಸಲಾಗುವುದು.

2)

14) ವಾಹನ ಚಾಲಕರು ಲಾಗ್ ಪುಸ್ತಕವನ್ನು ಹೊಂದಿರಬೇಕು ಮತ್ತು ಪ್ರತಿದಿನ ವಾಹನ ಚಾಲಿಸಿದ ದೂರದ ವಿವರವನ್ನು ದಾಖಲಿಸಿ ಸಂಬಂಧಪಟ್ಟ ಅಧಿಕಾರಿಗಳಿಂದ ದೃಢೀಕರಿಸಿಕೊಳ್ಳತಕ್ಕದ್ದು.

15) ವಾಹನದ ಮಾಸಿಕ ಬಿಲ್ಲನ್ನು ಪಾವತಿಗಾಗಿ ದೃಢೀಕೃತ ಲಾಗ್ ಪುಸ್ತಕದ ಪ್ರತಿಯೊಡನೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಯವರಿಗೆ ಸಲ್ಲಿಸತಕ್ಕದ್ದು.

16) ಮಾಸಿಕ ಬಿಲ್ಲಿನ ಮೊತ್ತಕ್ಕೆ ನಿಯಮಾನುಸಾರ ಆದಾಯ ತೆರಿಗೆಯನ್ನು ಕಟಾಯಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

17) ಸಂಶೋಧನಾ ಸಮಾಲೋಚಕರು ಮತ್ತು ಅಪರ ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ, ಇವರ ತೀರ್ಮಾನವೇ ಅಂತಿಮವಾದದ್ದು ಹಾಗೂ ವಾಹನವನ್ನು ಬಾಡಿಗೆ ಪಡೆಯುವ ವಿಷಯದ ಕುರಿತು ಎಲ್ಲಾ ಹಕ್ಕುಗಳು ಅವರಿಗೆ ಸೇರಿದೆ.

18) ವಾಹನವನ್ನು ನಿಗದಿತ ದಿನಾಂಕ/ವೇಳೆಯೊಳಗೆ ಕಳುಹಿಸದಿದ್ದಲ್ಲಿ ದಿನಕ್ಕೆ ರೂ.500/- ಗಳ ಶುಲ್ಕವನ್ನು ದಂಡದ ರೂಪದಲ್ಲಿ ವಿಧಿಸಲಾಗುವುದು ಮತ್ತು ಸದರಿ ಅವಧಿಗೆ ಬಾಡಿಗೆಯನ್ನು ಪಾವತಿಸಲಾಗುವುದಿಲ್ಲ.

19) ವಿಶೇಷ ಸಂದರ್ಭಗಳಲ್ಲಿ ಸಾರ್ವತ್ರಿಕ ರಜಾ ದಿನಗಳಲ್ಲೂ ಕೆಲಸ ನಿರ್ವಹಿಸಲು ಬದ್ಧರಾಗಿರತಕ್ಕದ್ದು.

20) ಒದಗಿಸಿರುವ ವಾಹನವು ಎರಡು ವರ್ಷಗಳಿಗಿಂತ ಹಳೆಯದಾಗಿರಬಾರದು ಮತ್ತು ಸದಾ ಸುಸ್ಥಿಯಲ್ಲಿರಬೇಕೆ.

-